# 8

# ಪ್ರೀತಿಸುವದು ಮತ್ತು ಜೀವಿಸುವದು

## (1 ಥೆಸಲೋನೀಕ 4:9-12)

ಕ್ರೈಸ್ತರು ಯಾವಾಗಲೂ ವೃದ್ಧಿ ಹೊಂದಲು ಆಸ್ಪದವಿರುತ್ತದೆ. ಇತರೆ ಹೊಸ ಒಡಂಬಡಿಕೆಯ ಪತ್ರಿಕೆಗಳಂತೆ, ವರ್ತಮದ ವರ್ತನೆಯ ವೃದ್ಧಿಯ ಬಗ್ಗೆ ಥೆಸಲೋನೀಕ ಪತ್ರಿಕೆಯು ಉತ್ತೇಜನವನ್ನು ನೀಡುತ್ತದೆ. ಯೌವನಸ್ಥರೂ, ನಂಬಿಗಸ್ತರೂ, ಹಾಗೂ ಪ್ರಿಯ ಕ್ರೈಸ್ತರೂ ಆದವರಿಗೆ ಬರೆದು, ಹಾದರಕ್ಕೆ ದಾರವಾಗಿದ್ದು, ಪರಿಶುದ್ಧ ಜೀವಿತಕ್ಕಾಗಿ ಪ್ರಯತ್ನಿಸಿರಿ ಎಂದು ತಿಳಿಸಿ, ಅವರ ಜೀವಿತದಲ್ಲಿ ಎರಡು ವಿಧವಾದ ಸಂಗತಿಗಳನ್ನು ಮಾಡಿರಿ ಎಂದು ಉತ್ತೇಜಿಸಲಾಯಿತು: ಅವರು ಪ್ರೀತಿಯಲ್ಲಿ ಹೆಚುತ್ತಾ ಸಮಾಧಾನದಲ್ಲಿ ಜೀವಿಸಬೇಕು ಎಂಬ ಸದ್ಗುಣಗಳು. ಈ ಸದ್ಗುಣಗಳ ಒಳ್ಳೆಯ ಪರಿಣಾಮವು ಇತರರಿಗೆ ಒಳ್ಳೆಯ ಪ್ರಭಾವವನ್ನು ಬೀರುತ್ತಿತ್ತು, ಅದರಲ್ಲಿ ಕ್ರೈಸ್ತರು ಮತ್ತು ಸಭೆಯಿಂದ ಹೊರಗೆ ಇದ್ದವರು ಸಹ ಒಳಗೊಂಡಿದ್ದರು. ದೇವರ ದೃಷ್ಟಿಯಲ್ಲಿ ಸರಿ ಕಾಣುವ ವರ್ತನೆಯು ಇತರರಿಗೆ ಅನುಕೂಲವಾಗುವ ಸಹಾಯವು ಮತ್ತು ವರ್ಚಸ್ಸು ಆಗಿತ್ತು. ಅವರಲ್ಲಿ ಈ ವಿಧವಾಗಿ ಸುವಾರ್ತೆಯು ಪ್ರಕಟವಾಗಿತ್ತು.

ಪ್ರೀತಿಸಿ ಮತ್ತು ದೇವರಲ್ಲಿ ಜೀವಿಸುವದು ಕ್ರೈಸ್ತ ಅಭಿವೃದ್ಧಿಯ ಗುಣಗಳಾಗಿರುತ್ತದೆ. ನಮ್ಮ ಸುತ್ತಲಿನವರಿಗೆ ನಮ್ಮಿಂದ ಪ್ರಕಟವಾಗುವ ವರ್ಚಸ್ಸು ಮತ್ತು ನಮ್ಮಲ್ಲಿ ನಡಕೊಳ್ಳುವ ರೀತಿ ಕ್ರೈಸ್ತ ಪರಿಪಕ್ವತೆಗೆ ಸೂಚಕವಾಗಿರುತ್ತದೆ.

### ಪ್ರೀತಿಯಲ್ಲಿ ವೃದ್ಧಿಯಾಗಿರಿ (4:9, 10)

ಪ್ರೀತಿಯಲ್ಲಿ ವೃದ್ಧಿಯಾಗುತ್ತಿರುವಿರಾ? ಇದು ಅವಮಾನಕರವಾದ ಪ್ರಶ್ನೆಯಾಗಿರಬಹುದು. ನಾವು ಪ್ರೀತಿಯಲ್ಲಿ ವೃದ್ಧಿಯಾಗದೆ ಇರುವದು ಅವಮಾನವಾಗಿದೆ. ಪ್ರೀತಿಸುವದು ನಮ್ಮ ಸ್ವಭಾವದಲ್ಲಿ ಇಲ್ಲದೆ ಇರುವದರಿಂದ, ಈ ಪ್ರಶ್ನೆಯು ಅಸಹಜವೆನಿಸುತ್ತದೆ ಬಹುಶಃ ನಾವುಗಳು ಈಗಾಗಲೇ ಪ್ರೀತಿಸುತ್ತಿರುವದರಿಂದ, ಈ ಪ್ರಶ್ನೆಯು ನಮ್ಮನ್ನು ಸಂದಿಗ್ಧ ಪರಿಸ್ಥಿತಿಗೆ ನಡೆಸುತ್ತದೆ.

ಅಪೊಸ್ತಲರು, ಸುವಾರ್ತೆ ಪ್ರಸಂಗಕ್ಕಾಗಿ ಥೆಸಲೋನೀಕಕ್ಕೆ ಬಂದಿದ್ದರು (2:2), ಪರಿವರ್ತನೆ ಹೊಂದಿದ್ದ ಈ ಜನರು ಇದನ್ನು ದೇವರ ಸಂದೇಶ ಎಂದು ಸ್ವೀಕರಿಸಿದ್ದರು (2:13). ಅವರ ಬೋಧನೆಯು ದೇವರ ಪ್ರೀತಿಯನ್ನು ಒಳಗೊಂಡಿತ್ತು, ಅದರಲ್ಲಿ ಸಂದೇಹವಿಲ್ಲ (1:4). ಆ ಪ್ರಸಂಗಿಗಳು ಈ ಸಂದೇಶವನ್ನು ಥೆಸಲೋನೀಕದವರಿಗೆ ತಮ್ಮ ಜೀವಿತದ ಮೂಲಕ ಪ್ರಕಟಿಸಿಕೊಂಡಿದ್ದರು (2:7, 8). ಥೆಸಲೋನೀಕದ ಕ್ರೈಸ್ತರು, ಪ್ರೀತಿಯ ಕುರಿತಾಗಿ ಕೇಳಿ ಬೋಧನೆಯ ಅನುಭವವನ್ನು ಪ್ರಯಾಣಿಕರಾದ ಪ್ರಸಂಗಿಗಳ ಮೂಲಕ ತಿಳುಕೊಂಡಿದ್ದರು (3:6). ಅವರಿಗೆ ಪ್ರೀತಿಯ ಕುರಿತು ಹೇಳುವ ಅಗತ್ಯತೆಯಿರಲಿಲ್ಲ, ಯಾಕಂದರೆ ಅವರು ಅದನ್ನು ಈಗಾಗಲೇ ಕೇಳಿ, ಅನುಭವಿಸಿ, ಅದರ ಅಪ್ಪಣೆಯನ್ನು ಪಾಲಿಸಿದ್ದರು.

ಯೇಸು ಮುಂದಾಗಿ ಹೇಳಿದಂಥ ಸುವಾರ್ತೆಯ ಸಾಕ್ಷಿಯು ಈ ಜನರಲ್ಲಿ ನೆರವೇರಿತ್ತು. ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ: "ಏನೆಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿ ಸಬೇಕು ಎಂಬುದೆ. ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು ಅಂದನು" (ಯೋಹಾನ 13:34, 35). ಈ ಪತ್ರಿಕೆಯಲ್ಲಿ

ಪೌಲನು ಈ ಹೊಸ ಕ್ರೈಸ್ತರಿಗೆ ಬರೆದು, ದೇವರ ಈ ಯೋಜನೆಯ ಕಾರ್ಯವು ಅವರಲ್ಲಿ ಪ್ರಗತಿ ಹೊಂದಬೇಕೆಂದು ತಿಳಿಸಿದನು.

ಈ ಕ್ರೈಸ್ತರು ತಮಗೆ ಒಪ್ಪಿಸಲ್ಪಟ್ಟ ಪ್ರೀತಿಯನ್ನು ತಮ್ಮ ಸಭೆಯವರಿಗೂ ಹಾಗೂ ಅವರ ನೆರೆಹೊರೆಯವರಿಗೂ ಹಂಚಿಕೊಳ್ಳಬೇಕೆಂಬ ಪ್ರಬೋಧನೆಯನ್ನು ಹೊಂದಿದ್ದರು, ಅದನ್ನು ಬೆರೂಯ ಹಾಗೂ ಫಿಲಿಪ್ಪಿಯಲ್ಲಿ ಪ್ರಾಯೋಜಿಸಬೇಕಿತ್ತು. ಅವರು ಪ್ರೀತಿಯ ಒಳ್ಳೆಯ ಕಾರ್ಯವನ್ನು ಮಾಡುತ್ತಿದ್ದರು. ಪತ್ರಿಕೆಯಲ್ಲಿ ಈಗಾಗಲೆ ಬರೆದಿರುವಂತೆ, ಪ್ರೀತಿಯಲ್ಲಿ ವೃದ್ಧಿಹೊಂದುವಂತೆ ಪ್ರೋತ್ಸಾಹಿಸಿದರು (3:12). ಈ ಪತ್ರಿಕೆಯನ್ನು ಸ್ವೀಕರಿಸಿದವರು ಪ್ರೀತಿ ಯನ್ನು ಹೊಂದಿರಲಿಲ್ಲ ಎಂಬ ಟೀಕೆಯನ್ನು ಮಾಡುತ್ತಿರುವದಿಲ್ಲ. ಅವರು ಈಗಾಗಲೇ ಒಳ್ಳೆಯ ಕಾರ್ಯವನ್ನು ಮಾಡುತ್ತಿದ್ದರು; ಆದರೆ ಅವರ ಸಾಮರ್ಥ್ಯವು ಇನ್ನು ಹೆಚ್ಚಾಗಿತ್ತು, ಆದುದರಿಂದ ಅದರಲ್ಲಿ ವೃದ್ಧಿಯನ್ನು ಹೊಂದಬೇಕೆಂದು ಪ್ರೋತ್ಸಾಹಿಸಲಾಯಿತು (4:9, 10).

ಪ್ರೀತಿಯಿಂದ ತುಂಬಿದ್ದ ಈ ಸಭೆಯು, ಪ್ರೀತಿಯಲ್ಲಿ ವೃದ್ಧಿ ಹೊಂದಬೇಕೆಂದು ಪದೇ ಪದೇ ಪ್ರೋತ್ಸಾಹಿಸಲಾಯಿತು. ಯಾಕೆ ಇದನ್ನು ಮಾಡಲಾಯಿತು? ಕ್ರೈಸ್ತ ಜೀವಿತದಲ್ಲಿ ಪ್ರೀತಿಯು ಪ್ರಮುಖ ಪಾತ್ರವನ್ನು ಹೊಂದಿತ್ತು. ಒಂದು ವೇಳೆ ಇದು ಅವರಿಗೆ ಪ್ರಾಮುಖ್ಯವಾಗಿದ್ದರೆ, ನಮಗೂ ಸಹ ಪ್ರಾಮುಖ್ಯವಾದದ್ದೆ. ನಮ್ಮ ಪ್ರೀತಿ ಹೇಗಿದೆ? ಈ ವಿಶ್ವಾಸಿಗಳು ಅದನ್ನು ಒಪ್ಪಿಕೊಂಡಂತೆ, ನಾವುಗಳು ಒಪ್ಪುವದಕ್ಕೆ ಸಾಧ್ಯವೆ? ನಮ್ಮಲ್ಲಿರುವ ಪ್ರೀತಿಯ ಬಗ್ಗೆ, ನಮ್ಮ ಸಭೆಯವರು ಮತ್ತು ಸಮುದಾಯವು ಅರಿತ್ತಿದೆಯೇ? ಯೇಸುವಿನ ಶಿಷ್ಯರಲ್ಲಿದ್ದಂತ ಪ್ರೀತಿಯ ವರ್ಚಸ್ಸು ನಮ್ಮಲ್ಲಿದೆಯೇ? ಇತರರಿಗಾಗಿ ನಮ್ಮಲ್ಲಿರುವ ಪ್ರೀತಿಯನ್ನು ನೋಡಿ, ನಾವು ಕ್ರೈಸ್ತರು ಎಂದು ಜನರು ಅರಿಯಬಹುದೆ? (ಯೋಹಾನ 13:35).

ಪ್ರೀತಿಯಲ್ಲಿ ಹೇಗೆ ಮುಂದುವರಿಯೋಣ? ಇತರರು ಸಹ ಹೆಚ್ಚಾಗಿ ಪ್ರೀತಿಸ ಬೇಕು ಎಂದು ಹೇಗೆ ಸಹಾಯಿಸೋಣ? ಯೇಸುವಿನ ಪ್ರೀತಿಯನ್ನು ಅರ್ಥಮಾಡಿ ಪ್ರತಿಬಿಂಬಿಸುವದರಿಂದಲೇ ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು, ಯೇಸು ತನ್ನ ಶಿಷ್ಯರಿಗೆ ಹೇಳಿದನು. "ನಾನು ನಿಮ್ಮನ್ನು ಪ್ರೀತಿಸಿದಂತೆಯೇ ನೀವು ಸಹ ಪ್ರೀತಿಸಿರಿ, ..." (ಯೋಹಾನ 13:34; 15:12). ಮೊದಲನೆಯದಾಗಿ, ಆತನ ಪ್ರೀತಿ ಏನು ಎಂದು ನಾವು ಅರಿಯಬೇಕು.

ದೇವರ ಪ್ರೀತಿಯ ಕುರಿತು ನಮಗೆ ಪಾಠದ ಅಗತ್ಯತೆ ಇದೆ. ಯೇಸುವಿನ ಪ್ರೀತಿಯನ್ನು ಮತ್ತು ಅದರ ಅನುಸರಣೆಯ ಕುರಿತಾದ ಪಾಠದ ಅವಶ್ಯವಿದ್ದು, ಆತನ ಯಥಾರ್ಥವಾದ ಶಿಷ್ಯರಾಗಿ, ಆತನ ಹೆಜ್ಜೆಯ ಜಾಡಿನಲ್ಲಿ ಮುಂದುವರಿಯುವ ಅಗತ್ಯತೆಯಿದೆ. ಪ್ರೀತಿಯ ಆಲೋ ಚನೆಯ, ಮಾತುಗಳ, ಹಾಗೂ ಕ್ರಿಯೆಗಳ ಕುರಿತಾದ ಬೆಲೆಯುಳ್ಳ ಚಟುವಟಿಕೆಗಳ ಅಗತ್ಯತೆ ನಮಗಿದೆ. ಒಂದು ಸಮಯದಲ್ಲಿ ಒಬ್ಬನನ್ನು ಪ್ರೀತಿಸುವ ಮೂಲಕ ಕ್ರಿಸ್ತನಲ್ಲಿರುವ ಪ್ರೀತಿಯ ಸರಳ ಮಾರ್ಗವನ್ನು ತೋರ್ಪಡಿಸಬಹುದು. ಆ ಬೋಧಕರುಗಳು, ಅವರ ಜನರಿಗೆ ತೋರಿದ ಪ್ರೀತಿಯ ಕ್ರಿಯೆಗಳನ್ನು ನಾವೂ ಸಹ ಮಾಡಲು, ದೇವರ ಪ್ರೀತಿಯು ನಮಗೆ ಸ್ಫೂರ್ತಿ ನೀಡಲಿ, ಆ ಪ್ರೀತಿಯು ಅವರಲ್ಲಿ ವೃದ್ಧಿಯನ್ನು ಹೊಂದಿ, ಅರಳುವಂತೆ ಪ್ರೀತಿಯ ಸಹಾಯವನ್ನು ನಾವು ಮಾಡೋಣ. ಇದು ನಮ್ಮ ಜೀವಿತದ ಪ್ರಾಮುಖ್ಯವಾದ ಕೆಲಸವಾಗಿದೆ!

ಪ್ರೀತಿಯ ಯೋಚನೆವುಳ್ಳವರು, ಪ್ರಾರ್ಥಿಸುವವರು, ಉತ್ತೇಜನ ನೀಡುವವರು, ಕೃತಜ್ಞ ರಾದವರು, ಪತ್ರ ಬರೆಯುವವರು, ಹಾಗೂ ಸಂದರ್ಶಿಸುವವರೂ ಆಗಿರಿ. ಈ ಕ್ಷೇತ್ರಗಳಲ್ಲಿ ನೀವು ಕೆಲಸವನ್ನು ಒಳ್ಳೆಯ ರೀತಿಯಲ್ಲಿ ಮಾಡದೆ ಇದ್ದಲ್ಲಿ ಇಂದೇ ಆರಂಭಿಸಿ, ಈಗಾಗಲೇ ನೀವು ಒಳ್ಳೆಯು ಕೆಲಸವನ್ನು ಮಾಡಿರುವುದಾದರೆ, ಈ ಪಾಠವು ನಿಮ್ಮನ್ನು ಪ್ರೀತಿಸುತ್ತದೆ! ಅದು ನಿಮ್ಮನ್ನು ಇತರರನ್ನು ಒಳ್ಳೆಯ ಕಾರ್ಯಕ್ಕೆ ನಡೆಸಿ ನಿತ್ಯತ್ವಕ್ಕೆ ಸೇರಿಸುತ್ತದೆ!

## ಜೀವಿಸುವದರಲ್ಲಿ ವೃದ್ಧಿಯಾಗಿರಿ (4:11)

ಥೆಸಲೊನೀಕದ ಕ್ರೈಸ್ತರಿಗೆ ತಮ್ಮ ಸ್ವಂತ ಕಾರ್ಯವನ್ನೆ ನಡಿಸಿಕೊಂಡು ಕೈಯಾರೆ

ಕೆಲಸಮಾಡುವದೇ "ಮಾನ್ಯದೆಂದೆಣಿಸಿರಿ" ಎಂದು ಬೋಧಿಸಲಾಗಿತು (4:11). ಅವರ ಸ್ವಂತ ಕೆಲಸದ ಸಂಗಡ ಅವರು ಒಳ್ಳೆಯ ಕಾರ್ಯವನ್ನು ಮಾಡಬೇಕೆಂದು ದೇವರು ಬಯಸಿದನು. ಈ ಸಭೆಗೆ ಬರೆದ ಎರಡನೆಯ ಪತ್ರದಲ್ಲಿ, ಮತ್ತೊಬ್ಬರ ಕಾರ್ಯದಲ್ಲಿ ತಲೆಹಾಕದೆ ಸುಮ್ಮನಿರ ಬೇಕೆಂದು ಬರೆಯಲಾಗಿದೆ. ಕೆಲಸದ ಪ್ರಾಮುಖ್ಯತೆಯನ್ನು ಈ ವಚನವು ತಿಳಿಸುತ್ತದೆ, ಅದು ದೇವರಿಗೆ ಪ್ರಾಮುಖ್ಯವಾಗಿರುವದರಿಂದ, ಅವರಿಗೂ ಪ್ರಾಮುಖ್ಯವಾಗಿತ್ತು.

ಕೆಲವು ಸಾರಿ, ದೇವರು ಪ್ರಸಂಗಿಗಳಲ್ಲಿ ಮತ್ತು ಬೋಧಿಸುವವರಲ್ಲಿ ಆಸಕ್ತಿ ಹೊಂದಿರುವನು ಎಂದು ಯೋಚಿಸುತ್ತೇವೆ. ಥೆಸಲೊನೀಕದವರು ಹಾಗೂ ನಾವುಗಳು "ಕೈಯಾರೆ ಕೆಲಸ ಮಾಡುವದೇ" ಪ್ರಾಮುಖ್ಯ ಎಂದು ದೇವರು ತಿಳಿಸುವದನ್ನು ನಾವು ಅರಿಯಬೇಕು. "ಕೈಯಾರೆ ಕೆಲಸ ಮಾಡುವದು" ದೇವರ ಕೆಲಸದಂತೆಯೇ ಪ್ರಾಮುಖ್ಯ ವಾಗಿದೆ. ದೇವರ ಹಾದಿಯಲ್ಲಿಯೇ ನಮ್ಮ ಕೆಲಸಗಳು ನಡೆಯಬೇಕು. ಆ ರೀತಿಯ ಕೆಲಸಕ್ಕಾಗಿ ಆ ದೇವ ಜನರು ಆ ದೇಶವನ್ನು ಪಡೆದಿದ್ದರು, ಅದಕ್ಕೆ ಉದಾಹರಣೆಯಾಗಿ ಸುವಾರ್ತೆಯನ್ನು ಕಷ್ಟಪಟ್ಟು ಸಾರುವಂತ ಹಾಗೂ ತಮ್ಮ ಕೈಗಳಿಂದ ಕೆಲಸ ಮಾಡಿದ ಜನರನ್ನು ಗಮನಿಸಿದ್ದರು. ಅದರಲ್ಲಿ ಅವರ ತಾಳ್ಮೆ ಮತ್ತು ಮೌನವನ್ನು ಗಮನಿಸಿದ್ದರು (2:8, 9).

ತಮ್ಮ ಕೆಲಸದಲ್ಲಿ ಕ್ರೈಸ್ತರು ಇದೇ ವಿಧವಾದ ಮಾದರಿಯನ್ನು ಅನುಸರಿಸಲು ತಿಳಿಸಲಾಯಿತು. ಕೊಲೊಸ್ಸೆಯಲ್ಲಿದ್ದ ಯಜಮಾನ ಮತ್ತು ದಾಸನ ಸಂಬಂಧದಂತೆ ದೇವರು ಅವರ ಯಜಮಾನ, ಮತ್ತು ನಾವೆಲ್ಲರೂ ಆತನ ಕೈ ಕೆಳಗೆ ಆತನ ಕೆಲಸವನ್ನು ನಡಿಸುವವರು ಎಂದು ಗ್ರಹಿಸಿಕೊಳ್ಳಬೇಕು. ಕೊಲೆಸ್ಸೆಯವರನ್ನು ಕುರಿತು, "ನೀವು ಯಾವ ಕೆಲಸವನ್ನು ಮಾಡಿದರು ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃ ಪೂರ್ವಕವಾಗಿ ಮಾಡಿರಿ" ಎಂದು ತಿಳಿಸಲಾಯಿತು (ಕೊಲೆಸ್ಸೆ 3:23). ಲೋಕದಲ್ಲಿ ಅವರು ದೊಡ್ಡ ಗುರುವನ್ನು ಹೊಂದಿದ್ದರು! ಆತನೇ ನಮ್ಮ ಗುರುವೂ ಆಗಿದ್ದಾನೆ! ಕರ್ತನಿಗಾಗಿ ಕೆಲಸಮಾಡಿರಿ!

ನಿಮಗೆ ತವಕವಿದೆಯೇ? ನೀವು ತವಕವುಳ್ಳವರಾಗಿರಬೇಕೆಂದು ದೇವರು ಬಯಸುತ್ತಾನೆ. ದೈವ ಭಕ್ತಿಯಿಲ್ಲದ ಮೂಲಗಳಿಂದ ನೀವು ತವಕವುಳ್ಳರಾಗಬಾರದೆಂದು ದೇವರು ತಿಳಿಸುತ್ತಾನೆ. ಅಥವಾ ನೀವುಗಳು ಮನುಷ್ಯರ ಗೌರವ ಮತ್ತು ಉದ್ದೇಶಗಳನ್ನು ಮಾಡಬೇಕೆಂದು ಸಹ ತಿಳಿಸುವದಿಲ್ಲ. ನಾವು ಉತ್ತಮವಾದ ಕೆಲಸವನ್ನು ಮಾಡುವ ತವಕವನ್ನು ಹೊಂದಿರಬೇ ಕೆಂದು ದೇವರು ಬಯಸುವನು. ಲೋಕದಲ್ಲಿ ಆತನು ಉತ್ತಮವಾದ ಯಜಮಾನನಾಗಿದ್ದಾನೆ. ಆತನು ನಮ್ಮ ಇತಿ ಮಿತಿಗಳನ್ನು ಬಲ್ಲನು ನಮ್ಮಲ್ಲಿ ಉತ್ತಮವಾದದ್ದನ್ನೇ ಆತನು ನಿರೀಕ್ಷಿ ಸುವನು. ಕೆಲಸವು ನಮಗೆ ಅಗತ್ಯ ಮತ್ತು ಆ ಕೆಲಸವನ್ನು ಉತ್ತಮವಾಗಿ ಮಾಡುವದರಿಂದ ನಮಗೂ ಮತ್ತು ಇತರರಿಗೂ ಆದಾಯಕರ ಎಂದು ತಿಳಿದಿರುವನು. ನಿಮ್ಮ ಕೆಲಸವು ದೇವರಿಗೆ ಪ್ರಾಮುಖ್ಯವಾಗಿದೆ. ಆ ಕೆಲಸವು ಇತರರು ತಿಳಿಯದೆಯು ಅಥವಾ ಮೆಚ್ಚದೆಯೂ ಇರಬಹುದು, ಆದರೆ ನೀವು ನಿಮ್ಮ ಕೆಲಸದಲ್ಲಿ ಉತ್ತಮರಾಗಿರಬೇಕೆಂದು ದೇವರು ಯೋಚಿಸಿರುವದರಿಂದ, ನೀವು ಆತನ ಉತ್ತಮವಾದ ಕೆಲಸಗಾರರಾಗಿರುವಿರಿ.

ನಿಮ್ಮ ಕೆಲಸದಲ್ಲಿ ದೇವರು ಆಸಕ್ತಿ ಹೊಂದಿರುವನು. ಲೋಕದಲ್ಲಿ ಮತ್ತು ಕೆಲವು ಸಾರಿ, ಕೆಲವು ಕ್ರೈಸ್ತರಲ್ಲಿ, ಕೆಲವು ನಿರ್ದಿಷ್ಟವಾದ ಕೆಲಸಗಳು ಮಾತ್ರ ಯೋಗ್ಯವಾದವು ಎಂದು ತಿಳಿಯುತ್ತೇವೆ. ಅದರ ದೆಸೆಯಿಂದ, ಕೆಲವರ ಕೆಲಸವನ್ನು ಗೌರವಿಸುವಂತ ಬಲೆಗೆ ಬೀಳು ತ್ತೇವೆ, ಆದರೆ ಆ ಕೆಲಸದಲ್ಲಿ ಅವರಿಗಿರುವ ಮನೋಭಾವನೆಯನ್ನಾಗಲೀ ಪ್ರಯತ್ನವನ್ನಾಗಲೀ ತಿಳುಕೊಳ್ಳುವದಿಲ್ಲ. ಆದುದರಿಂದ ಕಸಗಡಿಸುವವನಿಗಿಂತ, ವೈದ್ಯ ವೃತ್ತಿಯವನು ಮೇಲು ಎಂದು ತಿಳಿಯುತ್ತೇವೆ. ಅದು ಸತ್ಯವಲ್ಲ. ಒಬ್ಬನು ದೇವರಲ್ಲಿ ದೃಷ್ಟಿಯನ್ನು ಇಡುವುದಾದರೆ, ದೇವರು ಅವನನ್ನು ಮೆಚ್ಚುವನೇ ವಿನಃ, ಪದವೀದರ ನನ್ನಾಗಲೀ, ಪದಕಗಳನ್ನಾಗಲೀ ಅಥವಾ ಪ್ರಶಸ್ತಿ ಪತ್ರಗಳನ್ನು ಹೊಂದಿರುವವರನ್ನು ಮೆಚ್ಚುವದಿಲ್ಲ. ಪ್ರಾಪಂಚಿಕ ಘನತೆಗಳನ್ನು

ಪೌಲನು, "ಕಸವೆಂದು" ಎಣಿಸಿದನು (ಫಿಲಿಪ್ಪಿ 3:4-8). ನನ್ನ ಸಂಬಂಧಿಕರಲ್ಲಿ ಮೂರು ಜನ ವೈದ್ಯರಿರುವರು. ಅದು ದೊಡ್ಡ ಕಾರ್ಯವೇ ಸರಿ. ಆದರೆ ಅದು ಕಸವನ್ನು ಬಾಚುವಂತೆಯೂ ಮಕ್ಕಳ ಪೋಷಣೆಯನ್ನು ಮಾಡುವಂತೆಯೂ, ಅಥವಾ ಕೊಳೆಯಾದ ನೆಲವನ್ನು ಸ್ವಚ್ಛಮಾಡುವ ಕಾರ್ಯಕ್ಕೆ ಹೋಲಿಕೆಯಾಗಿದೆ. ಅದನ್ನು ದೇವರಿಗಾಗಿ ಮಾಡುವಾಗ ಸಾಧ್ಯವಾಗುತ್ತದೆ.

ನಮ್ಮ ಕೆಲಸವನ್ನು ದೇವರು ಮೆಚ್ಚುವನು ಎಂದು ಅರಿತು, ಅದರ ಪ್ರಕಾರ ಅನುಸರಿಸ ಬೇಕು. ತಾಯಿಯು ತನ್ನ ಮಗುವಿಗೆ ಪೋಷಣೆಯನ್ನು ಮಾಡುವಂಥದ್ದು ಲೋಕದಲ್ಲಿ ಅತಿ ಶ್ರೇಷ್ಟವಾದ ಕಾರ್ಯವಾಗಿರುತ್ತದೆ! ಮಗುವು ತನ್ನ ಪೋಷಕರಿಗೆ ವಿಧೇಯತೆಯಿಂದ ದೇವರ ಚಿತ್ತವನ್ನು ನೆರವೇರಿಸುವುದಾದರೆ, ತನ್ನ ಕೊಠಡಿಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳುತ್ತದೆ, ಅದು ದೇವರ ಮಹತ್ವಕಾಂಕ್ಷೆ ಆಗಿರುತ್ತದೆ! ನಿನ್ನ ಕೆಲಸವನ್ನು ಸರಿಯಾಗಿ ಮಾಡು; ಯಾಕೆಂದರೆ ನೀನು ವಿಶ್ವದಲ್ಲಿ ದೇವರ ಕೆಲಸವನ್ನು ಮಾಡುವವನಾಗಿದ್ದೀ!

## ಹೊರಗಿನವರ ಎದುರಿನಲ್ಲಿ ಸಜ್ಜನರಾಗಿರಿ (4:12)

ಮೌನವಾಗಿ ನೀವು ದೇವರ ಕೆಲಸವನ್ನು ಮಾಡುವಾಗ ಅದರ ಫಲಿತಾಂಶವೇನು? 4:12ರಲ್ಲಿ ಎರಡು ಫಲಿತಾಂಶಗಳನ್ನು ನೋಡುತ್ತೇವೆ: ಅದು ಹೊರಗಿನವರಲ್ಲಿಯೂ ಮತ್ತು ನಿನ್ನ ಕೊರತೆಗಳ ಮೇಲೂ ಪರಿಣಾಮವನ್ನು ಬೀರುತ್ತದೆ.

ಸಭೆಯ ಕುರಿತಾಗಿ ಹೊರಗಿನವರು ಏನನ್ನು ಯೋಚಿಸುತ್ತಾರೆ? ಥೆಸಲೊನೀಕದಲ್ಲಿ ಸುವಾರ್ತೆ ಸಾರುವ ವಿಷಯಕ್ಕೆ ಕೆಲವರು ತದ್ವಿರುದ್ಧವಾಗಿದ್ದರು ಮತ್ತು ಆ ಸಂದೇಶವನ್ನು ಅನುಸರಿಸುವವರಿಗೆ ವಿರೋಧ ವ್ಯಕ್ತಪಡಿಸಿದರು. ಅಪೊಸ್ತಲರ ಕೃತ್ಯಗಳು 17ರಲ್ಲಿ ಸುವಾರ್ತ ಪ್ರಸಂಗಿಗಳನ್ನು ಮತ್ತು ಅವರ ಸಂದೇಶ ಕೇಳಿದವರನ್ನು ಕಟ್ಟಾ ಯೆಹೂದ್ಯರು ಹಿಂಸಿಸಿದರು ಎಂದು ನೋಡುತ್ತೇವೆ. ಹೊರಗಿನವರು ಸಭೆಯನ್ನು ಕುರಿತು ಯಾವ ಪ್ರತಿಕ್ರಿಯೆಯನ್ನು ತೋರಿಸುವರು? ಅವರು ಅದನ್ನು ಪ್ರೀತಿಸುವರೋ ಅಥವಾ ದ್ವೇಶಿಸುವರೇ? ಅದು ಅವರಿಗೆ ಬಿಟ್ಟಂತ ವಿಷಯ. ಆದರೆ ಹೊರಗಿನವರ ಮುಂದೆ ನಮ್ಮ ವರ್ತನೆ ಏನು ಎಂದು ದೇವರು ಕೇಳುವವನಾಗಿದ್ದಾನೆ. ಹಿಂಸೆಯ ನಡುವೆಯು, ಥೆಸಲೊನೀಕದವರ ವರ್ತನೆಯು ಸರಿಯಾಗಿರಬೇಕಿತ್ತು. ಅದು ಪ್ರಾಮುಖ್ಯ ಸಂಗತಿಯಾಗಿತ್ತು. ಚದರಿಹೋದ ಕ್ರೈಸ್ತರು, "ನಿಮ್ಮ ನಡವಳಿಕೆಯು ಅನ್ಯಜನರ ಮಧ್ಯದಲ್ಲಿ ಯೋಗ್ಯವಾಗಿರಲಿ; ಆಗ ಅವರು ಯಾವ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಣ್ಣಾರೆ ಕಂಡು ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು" (1 ಪೇತ್ರ 2:12).

ಹೊರಗಿನವರ ಸಂಬಂಧದಲ್ಲಿ, ಕೇವಲ ಕೆಟ್ಟದ್ದನ್ನು ನಿರ್ಬಂಧಪಡಿಸುವದಲ್ಲ, ಆದರೆ ಅವರುಗಳು ಸಭೆಯವರಲ್ಲಿರುವ ಒಳ್ಳೆಯದನ್ನು ಸಹ ನೋಡಬೇಕು. "ಸಮಯವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದೆಂದು ಉಪಯೋಗಿಸಿ ಹೊರಗಿನವರ ಮುಂದೆ ಜ್ಞಾನವುಳ್ಳವರಾಗಿ ನಡೆದುಕೊಳ್ಳಿರಿ" (ಕೊಲೆಸ್ಸೆ 4:5). ನಾವು ಹೊರಗಿನವರೊಂದಿಗೆ, ದೇವರ ಮಾರ್ಗವನ್ನು ತಿಳಿಸುವಂತ ಒಳ್ಳೆಯ ಅವಕಾಶವಾಗಿದೆ. ಪ್ರತಿಕ್ರಿಯೆಯು ಅವರಿಗೆ ಸಂಬಂಧಪಟ್ಟದ್ದು, ಅವರ ಪ್ರತಿಕ್ರಿಯೆಗೆ ನಾವು ಜವಾಬ್ದಾರರಲ್ಲ, ಆದರೆ ನಮ್ಮ ಜೀವಿತದ ಮೂಲಕ ಅವರಿಗೆ ಬೋಧಿಸಲು ಒಂದು ಅವಕಾಶವಾಗಿದೆ, ಮತ್ತು ಅವರ ಜೀವಿತದಲ್ಲಿ ದೇವರ ಬೋಧನೆಯನ್ನು ತಿಳಿಯಲು ಅವರ ಸಾಮರ್ಥ್ಯವನ್ನು ತೋರುವ ಅವಕಾಶವಾಗಿದೆ. ನಮ್ಮಲ್ಲಿರುವ ದೇವರ ಕ್ರಿಯೆಗಳನ್ನು ಪ್ರಚುರ ಪಡಿಸಿದ ಮೊದಲ ಮತ್ತು ಒಂದೇ ಒಂದು ಅವಕಾಶವಾಗಿದೆ!

ದೇವರ ಮಾರ್ಗವನ್ನು ಮತ್ತು ಆತನ ಸಂದೇಶವನ್ನು ಅರಿಯದವರ ಸಂಗಡ ನಾವು ದೇವರ ಚಿತ್ತವನ್ನೆ ಅನುಸರಿಸಬೇಕು. ನಮ್ಮ ಕ್ರಿಯೆಗಳ ಕುರಿತು ಹೊರಗಿನವರು ಆಶ್ಚರ್ಯ

ಚಕಿತರಾಗುತ್ತಾರೆ. ದೇವರ ಕಾರ್ಯಗಳನ್ನು ಅವರಿಗೆ ತಿಳಿಸಲು ಇದು ಸದಾವಕಾಶವಾಗಿದೆ "ನಾನು ಈ ರೀತಿಯಾಗಿ ಬೆಳೆದೆ"; "ಅದನ್ನು ನನ್ನ ತಾಯಿ ಬೋಧಿಸಿದಳು"; "ಅದು ಸರಿಯಾದದ್ದು ಎಂದು ನನ್ನ ಅನಿಸಿಕೆ" ಎಂಬ ಶೋಧನೆಗೆ ಒಳಗಾಗದೆ, ಅದು ಸರಿಯಾದ ಅಭಿಪ್ರಾಯವಾಗಿದ್ದರೂ, ಅವುಗಳು ದೇವರಿಗೆ ಮಹಿಮೆ ತರಲಾರದ ವ್ಯಾಖ್ಯಾನಗಳಾಗಿವೆ. ಅದರ ಬದಲಾಗಿ, ಅವರು ನಮ್ಮನ್ನು ದೃಷ್ಟಿಸುತ್ತಾರೆ. ದೇವರ ಇಷ್ಟವನ್ನು ಮಾಡುವದೇ ನಮ್ಮ ಧ್ಯೇಯವಾಗಿರಬೇಕು. ಆಗ ಅದು ದೇವರು ನಮ್ಮನ್ನು ಗುರುತಿಸುವದಕ್ಕೂ ಮತ್ತು ಗೌರವಕ್ಕೂ ಪಾತ್ರವಾಗುತ್ತದೆ. ಬಹುಶಃ ನಾವು, "ಅದನ್ನೆ ದೇವರು ಬಯಸುವನು"; "ಅದು ದೇವರ ವಾಕ್ಯಕ್ಕೆ ಅನುಗುಣವಾಗಿರುವದರಿಂದ, ಆ ಕ್ರಿಯೆಯು ಯೋಗ್ಯವೇ"; ಅಥವಾ "ಈ ರೀತಿ ಯಾಗಿ ಜೀವಿಸುವ ಜೀವಿತವು ಆಧಾಯಕರವಾಗಿದೆ ಎಂದು ದೇವರು ತಿಳಿದಿರುವನು."

ವಚನ 12ರಲ್ಲಿ ಇನ್ನೊಂದು ಕಾರಣವನ್ನು ನೀಡಿ ನೀವು ಒಳ್ಳೆಯ ಕೆಲಸ ನಡಿಸುವದರಿಂದ, ನಿಮಗೆ ಯಾವದಕ್ಕೂ ಕೊರತೆಯಿರುವದಿಲ್ಲ. ದೇವರು ನಮ್ಮಿಂದ ಬಯಸುವ ಕಾರ್ಯಗಳಲ್ಲಿ ಅದಾಯವು ಇರುತ್ತದೆ. ಕೆಲಸವು ನಮ್ಮ ಕುರಿತಾದ ವರ್ಚಸ್ಸನ್ನು ಮಾತ್ರ ನೀಡದೆ, ಅದು ನಮ್ಮ ಕೊರತೆಗಳನ್ನು ಸಹ ನೀಗಿಸುತ್ತದೆ. ಎಫೆಸದವರಿಗೆ ಬರೆಯುವಾಗ, ಕಳವು ಮಾಡುವವನು ಇನ್ನು ಮೇಲೆ "ಕಳವು ಮಾಡದೆ ಕೈಯಿಂದ ಯಾವುದಾದರೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ" (ಎಫೆಸ 4:28). ಆಗ ಕಷ್ಟದಲ್ಲಿರುವವರಿಗೆ ಕೊಡುವದಕ್ಕೆ ನೀಗಿ ಸುವದಕ್ಕಾಗಿ ಕೆಲಸಮಾಡಬೇಕು. ಇದು ಕ್ರೈಸ್ತ ಜೀವಿತದ ಪ್ರತಿದಿನದ ಆಧ್ಯ ಕರ್ತವ್ಯ ವಾಗಿದೆ.

ಈ ದಿವಸಗಳಲ್ಲಿ, ಸಾಮಾಜಿಕ ಕೊರತೆಗಳನ್ನು ನೀಗಿಸುವದಕ್ಕಾಗಿ, ಸರ್ಕಾರಗಳು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವರು. ಆದರೆ, ನಾವು ಕೆಲಸಗಳನ್ನು ಮಾಡಲು ಶಕ್ತರಾಗಿರುವಾಗ, ಸರ್ಕಾರದಿಂದ ಸಹಾಯವನ್ನು ಪಡಕೊಳ್ಳುವುದು ದೈವಭಕ್ತಿಗೆ ವಿರೋಧವಾ ಗಿದೆ. ಕ್ರೈಸ್ತರಲ್ಲಿ, ಕೆಲಸ ಮಾಡುವಂತ ಹುಮ್ಮಸ್ಸನ್ನು ಯಾವ ರೀತಿಯಲ್ಲಿ ಬೆಳೆಸೋಣ? ಇದನ್ನು ನಮ್ಮ ಮಕ್ಕಳ ಜೀವಿತದಲ್ಲಿ ಆರಂಭಿಸೋಣ. ಅವರು ಇತರರಿಗೆ ಸಹಾಯಮಾಡುವಂತೆ ಪ್ರೋತ್ಸಾಹಿಸೋಣ. ಅವರು ಜವಾಬ್ದಾರಿಗಳನ್ನು ನೆರವೇರಿಸುವಂತೆ ಮಾದರಿಯನ್ನು ತೋರಿಸಿ, ಅವರುಗಳು ದೊಡ್ಡವರಾದ ನಂತರ ನೇರವೇರಿಸಬೇಕಾದ ಜವಾಬ್ದಾರಿಗಳ ಕುರಿತು ಬೋಧಿ ಸೋಣ. ದೇವರು ಅನುಗ್ರಹಿಸಿರುವಂತ ಕೆಲಸವನ್ನು ಅವರು ಹುಡುಕಿಕೊಳ್ಳವಂತೆಯೂ, ಆಶಿಸುವಂತೆಯೂ, ಅದು ಅವರಿಗೂ ಮತ್ತು ಇತರರಿಗೂ ಆದಾಯಕರವಾಗುವಂತೆಯೂ ತಿಳಿಸೋಣ, ಅವರನ್ನು ಒತ್ತಾಯಪಡಿಸಿ ಕೆಲಸ ಮಾಡಿಸದಂತೆ ಎಚ್ಚರವಾಗಿರೋಣ.

ಸೋಮಾರಿಗಳಾದ ಕ್ರೈಸ್ತರಿಗೂ - ಕೆಲಸ ಮಾಡುವದಾಗಲೀ, ಅಥವಾ ಸ್ವಂತ ಕುಟುಂಬದವರಿಗೆ ಸಹಾಯ ಮಾಡಲಾರದವರು - ದೇವರ ಸ್ವಭಾವಕ್ಕೆ ಕೆಟ್ಟ ಪ್ರತಿಬಿಂಬವನ್ನು ನೀಡುತ್ತಾರೆ. ಅದಕ್ಕೆ ವ್ಯತಿರಿಕ್ತವಾಗಿ, ಕೆಲಸಮಾಡುವಂತ ಕ್ರೈಸ್ತರು, ಸ್ವಂತ ಕೊರತೆಗಳನ್ನು ನೀಗಿಸಿಕೊಂಡು, ಇತರರಿಗೂ ಸಹಾಯಮಾಡುವಂತವರು, ಲೋಕದಲ್ಲಿ ವಿಶೇಷವಾದ ವರ್ಚಸ್ಸನ್ನು ಹೊಂದಿರುವರು. ಅಂಥಹ ವರ್ತನೆಯ ಅನುಸರಣೆಯಿಂದ, ಮತ್ತು ನಮ್ಮ ಹಾಗೂ ನಮ್ಮ ಕುಟುಂಬದವರ ಕೊರತೆಯನ್ನು ನೀಗಿಸುವದರಿಂದ (31ನೇ ಪುಟದ **ಪ್ರೀತಿಯ** ಕುರಿತು ಮುಂದುವರಿಯುತ್ತಿದೆ) ನಮ್ಮ ದೇವರ ಹಾಗೂ ನಮ್ಮ ಕುರಿತಾಗಿಯು ಲೋಕಕ್ಕೆಸಾಕ್ಷಿಯನ್ನು ಹೇಳುವವ ರಾಗಿರುತ್ತೇವೆ. ಇತರರ ಲಾಭಕ್ಕಾಗಿ ನಾವು ದೇವರ ಲೋಕದಲ್ಲಿ ದೇವರ ಕೆಲಸವನ್ನು ಮಾಡುತ್ತೇವೆ.

## ಮುಕ್ತಾಯ

ಈ ವಚನದ ಮೂಲಕ ಲಾಭದಾಯಕವಾದ ಮಾರ್ಗದರ್ಶನವನ್ನು ಪಡೆದು ಅದನ್ನು

“ಮಾನವಾದದ್ದೆಂದು” ತಿಳಿದು ಸ್ಫೂರ್ತಿದಾಯಕವಾದ ಪ್ರೀತಿಯಿಂದ ಅನುಸರಿಸಿರಿ. ಪ್ರೀತಿಯ ಮೂಲಕ, ನಮ್ಮ ಸಹೋದರರಿಗೆ ಸಕಾರಾತ್ಮಕವಾದ, ಉತ್ತಮವಾದ ಪ್ರೋತ್ಸಾಹ ನೀಡಲು ಸಾಧ್ಯವಿದೆ. ಸಮಾಧಾನಕರವಾದ ಕೆಲಸದ ಮೂಲಕ, ಇತರರ ಕೊರತೆಗಳನ್ನು ನೀಗಿಸಿ, ಲೋಕದಲ್ಲಿಯೂ ಮತ್ತು ಇತರರಿಗೂ ಉತ್ತಮವಾದ ವರ್ಚಸ್ಸನ್ನು ತೋರಲು ಸಾಧ್ಯವಿದೆ.

ಈ ಸದ್ಗುಣಗಳನ್ನು ನಿಮ್ಮ ವೃದ್ಧಿಗಾಗಿ ಯೋಜಿಸಿಕೊಳ್ಳಿರಿ. ನಾವೆಲ್ಲರೂ ಇದನ್ನು ಮಾಡುವಾಗ, ಅದರ ಫಲಿತಾಂಶ ಸಭೆಗಳನ್ನು ಬಲಪಡಿಸುತ್ತದೆ, ದೇವರ ಜನರಲ್ಲಿ ಪಾಲು ಹೊಂದದವರ ನಡುವೆ ಆರೋಗ್ಯಕರವಾದ ಸಾಕ್ಷಿಯಾಗುತ್ತದೆ, ಮತ್ತು ಜನರಿಗೆ ಸಹಾಯಮಾಡಲು ಸಾಮರ್ಥ್ಯ ಉಂಟಾಗುತ್ತದೆ. ಪ್ರೀತಿಯಿಂದ, ಜೀವಿಸುವದರಿಂದಲೂ ಬಲವಾದ ಸಭೆಗಳು ಉಂಟಾಗುತ್ತವೆ, ಮತ್ತು ಇತರರ ಕೊರತೆಗಳು ನೀಗುತ್ತವೆ.